# ಶ್ರೀ ಪ್ರಸನ್ನ ವೆಂಕಟದಾಸರು ರಚಿಸಿದ "ತಂದೆ ಪುರಂದರ ದಾಸರ ಸ್ಮರಿಸುವೆ" ಕೀರ್ತನೆಯ ಒಳನೋಟ

ನಿಮಗೆಲ್ಲರಿಗೂ ಗೊತ್ತಿರುವ ಹಾಗೆ ಶ್ರೀ ಪುರಂದರ ದಾಸರು ಮುಂದೆ ಬರುವ ಹರಿದಾಸ ಪೀಳಿಗೆಗೆ ಗುರುಸ್ಥಾನದಲ್ಲಿದ್ದು ಪ್ರೇರಕ ಶಕ್ತಿ ಆಗಿದ್ದರು. ಅದರಂತೆ ಶ್ರೀ ಪ್ರಸನ್ನ ವೆಂಕಟದಾಸರಿಗೂ ಪುರಂದರ ದಾಸರೆಂದರೆ ಬಹಳ ಭಕುತಿ. ಆದ್ದರಿಂದ ಇವರೂ ಪುರಂದರ ದಾಸರನ್ನು ತಮ್ಮ ಆದರ್ಶ ದಾಸರನ್ನಾಗಿಟ್ಟುಕೊಂಡು ಸಾಧನೆಗೈದರು.

ಪ್ರಸನ್ನ ವೆಂಕಟದಾಸರು ರಚಿಸಿದ:

**ತಂದೆ ಪುರಂದರ ದಾಸರ ಸ್ಮರಿಸುವೆ ಎನ್ನ ।**
**ಮಂದಮತಿಗಳೆದು ಹರಿಭಟನೆನಿಸುವೆ ॥** ॥ಪ॥

ಕೃತಿಯಲ್ಲಿ ಪ್ರಪ್ರಥಮವಾಗಿ ಪ್ರಸನ್ನ ವೆಂಕಟರು ಪುರಂದರ ದಾಸರ ಸಾಹಿತ್ಯ ರಚನೆಯ ಪ್ರಾಕಾರಗಳನ್ನು ದಾಖಲಿಸಿದ್ದಾರೆ. ಇದು ಸಂಶೋಧಕರಿಗೆ ಮಹತ್ವದ ಐತಿಹಾಸಿಕ ದಾಖಲೆಯಾಗಿದೆ.

ಇನ್ನು ಈ ಕೃತಿಯ ಒಳನೋಟವನ್ನು ಅರಿಯಲು ಪ್ರಯತ್ನಿಸೋಣ. ಪಲ್ಲವಿಯಲ್ಲಿಯೇ ತಂದೆ ಪುರಂದರ ದಾಸರ ಸ್ಮರಿಸಿ ನಾನು ಹರಿಭಟನೆನಿಸುವೆ ಎಂದು ಹೇಳಿದ್ದಾರೆ.

ಇನ್ನು ಒಂದನೇ ನುಡಿಯಲ್ಲಿ:

**ಗುರು ವ್ಯಾಸರಾಜರ ಚರಣಾಬ್ದ ಷಟ್‌ಚರಣನ ।**
**ವಿರುಕುತಿ ಭಕುತಿ ಜ್ಞಾನಾರ್ಣವನ ।**
**ವರ ಉಪನಿಷದ್ಧಾರಿನಿಧಿಗೆ ತಿಮಿಂಗಿಲನಹನ ।**
**ಧರೆಯ ಕವಿಕುಲ ಶಿಖಾಮಣಿಯೆನಿಪನ ॥** ॥೧॥

ಪುರಂದರ ದಾಸರು ತಮ್ಮ ಗುರುಗಳಾದ ವ್ಯಾಸರಾಜರ ಚರಣಕ್ಕೆ ತಮ್ಮನ್ನೇ ಸಮರ್ಪಿಸಿಕೊಂಡು ಭಕ್ತಿಯಿಂದ ಮಣಿದು ಎಲ್ಲದರಲ್ಲಿ ವಿರಕ್ತಿಯನ್ನು ಹೊಂದಿ ಜ್ಞಾನ ಭಕುತಿಯಿಂದ ಎಲ್ಲ ಉಪನಿಷತ್‌ಗಳನ್ನು ಅಧ್ಯಯಿಸಿ, ಅರಗಿಸಿಕೊಂಡು ಹರಿಪಾದವನ್ನು ಸ್ಮರಿಸುತ್ತ ಕೀರ್ತನೆಗಳನ್ನು ರಚಿಸಿ ಕವಿಕುಲಕ್ಕೇ ಮುಕುಟಪ್ರಾಯರೆಂದೆನಿಸಿದ ಇಂಥ ಶ್ರೀ ಪುರಂದರದಾಸರನ್ನು ಸ್ಮರಿಸುವೆ ಎಂದಿದ್ದಾರೆ.

ಇನ್ನು ೨ನೇ ನುಡಿಯಲ್ಲಿ:

**ದಿನ ದಿನ ಯದ್ಯಾಚ್ಛಾರ್ಥಲಾಭದಲಿ ತುಷ್ಟನ**
**ಕನಕನೋಷ್ಠ ಸಮಾನ ದೀಕ್ಷಿಸುವನ ।**
**ಘನ ಸಿದ್ಧಿಗಳು ತಾವೆ ಬರಲೊಡಂಬದನ ಹರಿ ।**
**ಗುಣ ಕೀರ್ತನೆಯಲ್ಲಿ ಪರಿವಶದಿಹನ ॥** ॥೨॥

ಇಲ್ಲಿ ದಿನದಿನಕ್ಕೂ ಅಂದರೆ ಎಲ್ಲ ಕಾಲಕ್ಕೂ ಹರಿ ಸ್ಮರಣೆಯಲ್ಲೇ ಸಂತುಷ್ಠರಾಗಿ, ತೃಪ್ತರಾಗಿ ಶ್ರೀ ಕೃಷ್ಣನು ಗೀತೆಯಲ್ಲಿ ಹೇಳಿದ ಹಾಗೆ "ಸುಖ-ದುಃಖ ಸಮಕತ್ವಾ" ಎಂಬಂತೆ ಸುಖ-ಸಂಪತ್ತು - ದುಃಖಗಳನ್ನು ಸಮಾನವಾಗಿ ನೋಡಿಕೊಳ್ಳುತ್ತ ಸಾಧನೆಗೊಳ್ಳುತ್ತಿರುವಾಗ ತಾವಾಗಿಯೇ ಘನ ಸಿದ್ಧಿಗಳು ಬಂದಾಗ ಅವುಗಳಿಗೆ ಲಕ್ಷ್ಯ ಕೊಡದೆ ಶ್ರೀ ಹರಿಯ ಗುಣ ಕೀರ್ತನೆಯಲ್ಲಿ ಭಕ್ತಿ ಪರವಶರಾಗಿ ನಿರತರಾದಂಥ ಶ್ರೀ ಪುರಂದರ ದಾಸರನ್ನು ಸ್ಮರಿಸುವೇ ಎಂದಿದ್ದಾರೆ ದಾಸರು.

**ಭವಜಲದಿ ಗೋಷ್ಪದಕೆ ಸರಿದಾಟಿ ಕಾಮ ಕ್ರೋ-**
**ಧವ ಮೆಟ್ಟಿ ಭಕ್ತಿಸುಧೆಯುಂಡು ತೇಗಿ**
**ಭುವಿಯಲ್ಲಿ ನಿಜಕೀರ್ತಿಯನು ಹರಹಿ ಪವನ ಮತ**
**ದವರೆನಿಪ ದಾಸರಿಗೆ ತವರೂಪ ತೋರಿದನ ॥ ॥೩॥**

ಭವ ಸಾಗರದಲ್ಲಿದ್ದರೂ ಎಲ್ಲವನ್ನೂ ದಾಟಿ, ಕಾಮ ಕ್ರೋಧಗಳನ್ನು ಮೆಟ್ಟಿ, ಯಾವಾಗಲೂ ಹರಿಯನ್ನು ಧ್ಯಾನಿಸತ್ತ ಆ ಭಕ್ತಿಯ ಸುಧೆಯನ್ನುಂಡು ಭುವಿಯಲ್ಲಿ ಅಂದರೆ ಈ ಲೌಕಿಕ ಜಗತ್ತಿನಲ್ಲಿಯೂ ಮಧ್ವ ಮತದ ಸಿದ್ಧಾಂತವನ್ನು ತೋರಿಸಿ, ಪವನ ಮತದ ಕೀರ್ತಿಯನ್ನು ಹರಡಿದ ಈ ಪುರಂದರ ದಾಸರನ್ನು ಸ್ಮರಿಸುವೆ ಎಂದು ದಾಸರು ಸ್ತುತಿಸಿದ್ದಾರೆ.

**ಕವನೋಕ್ತಿ ಮಳೆಗರೆದು ಹರಿದಾಸ ಪ್ವರ್ಗಗಳಿಗೆ**
**ಅವಿರಳಾನಂದ ವಿತ್ತರ್ಥಿಸುವನ ।**
**ನವ ಭಕುತಿ ಮನಗಂಡು ಸೇವೆಯದಾನಂದ ಪುರಪ-**
**ಥವನು ತೋರಿಸಿದಂಥ ಬಹು ಕೃಪಾಕರನ ॥ ॥೪॥**

ಇಲ್ಲಿ "ಪುರಂದರ ದಾಸರ ಕವನೋಕ್ತಿ" ಅಂದರೆ ತಮ್ಮ ಕೀರ್ತನೆಗಳಲ್ಲಿ ಭಗವಂತನ ರೂಪ, ಲೀಲೆಗಳು ಹಾಗೂ ನಾಮ ಸಂಕೀರ್ತನೆಯನ್ನು ಅನವರತ ಮಳೆಯಂತೆ ಸುರಿಸಿ ಹರಿದಾಸ ಪ್ವರ್ಗಗಳಿಗೆ ಅಂದರೆ ಅದನ್ನು ಭಕುತ ಜನರಿಗೆ ತಲುಪಿಸಿ, ನವ ವಿಧ ಭಕುತಿಯ ಸುಧೆಯನ್ನುಂಡು, ಆನಂತರ ಬೇರೆಯವರಿಗೂ ಅದರ ಸವಿಯನ್ನು ಹಂಚಿದಂಥಾ ಪುರಂದರ ದಾಸರನ್ನು ಸ್ಮರಿಸುವೆ ಎಂದಿದ್ದಾರೆ ದಾಸರು.

ಇನ್ನು ಕೊನೆಯ ನುಡಿಯಲ್ಲಿ ಪ್ರಸನ್ನ ವೆಂಕಟದಾಸರು ಪುರಂದರ ದಾಸರು ರಚಿಸಿದ ಹರಿದಾಸ ಸಾಹಿತ್ಯದ ಪ್ರಕಾರಗಳನ್ನೇ ಪಟ್ಟಿ ಮಾಡಿ ಅವರ ರಚನೆ ಎಷ್ಟು ವಿಸ್ತಾರ ಹಾಗೂ ಅಗಾಧವಾಗಿತ್ತು ಎಂಬುದನ್ನು ದಾಖಲಿಸುವಲ್ಲಿ ಪುರಂದರ ದಾಸರ ನಂತರ ಬಂದ ಹರಿದಾಸರಲ್ಲಿ ಮೊಟ್ಟಮೊದಲಿಗರಾಗಿದ್ದಾರೆ ಎಂದರೆ ತಪ್ಪಾಗಲಾರದು. ಇದು ಹಲವಾರು ಸಂಶೋಧಕರ ಆಸಕ್ತಿಯ ವಿಷಯ:

**ಗೀತ ಠಾಯಿ ಸುಳಾದ್ಯುಗಾಭೋಗ ಪದ ಪದ್ಯ**
**ವ್ರಾತ - ಪ್ರಬಂಧ ರಚಿಸಿ ವಿಠಲನ ।**
**ಪ್ರೀತಿ ಬಡಿಸಿ ಕಂಡ ನಲಿವ ವೈಷ್ಣವಾಗ್ರ**
**ನಾಥ ಪ್ರಸನ್ನ ವೆಂಕಟ ಕೃಷ್ಣ ಪ್ರೀಯನ ॥ ॥೫॥**

ಇವರ ಕೃತಿಗಳ ಪ್ರಕಾರಗಳೋ ಒಂದಲ್ಲ–ಎರಡಲ್ಲ. ಗೀತ–ಠಾಯಿ–ಸುಳಾದಿ–ಉಗಾಭೋಗ–ಪದ–ಪದ್ಯವ್ಯಾತ–ಪ್ರಬಂಧಗಳಲ್ಲಿ ವಿಜೃಂಭಿಸುವ ಲಾಲಿತ್ಯ ಶಬ್ದಗಳ ನೈಪುಣ್ಯ. ಅದರ ಜೊತೆ ಶ್ರೀಹರಿ ವಿಠ್ಠಲನ ಪ್ರೀತಿಯನ್ನು ತುಂಬಿ ಮನ–ಮನಗಳಲ್ಲೂ ಅದರ ಸವಿಯನ್ನು ಉಣಬಡಿಸಿ, ಶ್ರೀ ಕೃಷ್ಣನಿಗೆ ಪ್ರೀತಿಪಾತ್ರರಾದಂಥ ತಂದೆ ಪುರಂದರ ದಾಸರನ್ನು ಸ್ಮರಿಸುವೆ ಎಂದು ಅನನ್ಯ ಭಕ್ತಿಭಾವದಿಂದ ಶ್ರೀ ಪ್ರಸನ್ನ ವೆಂಕಟದಾಸರು ಸ್ತುತಿಸಿದ್ದಾರೆ.

– ಶ್ರೀಮತಿ ರೇಖಾ ಕಾಖಂಡಕಿ

ಶ್ರೀ ಪ್ರಸನ್ನ ವೆಂಕಟ ಸಂಶೋಧನಾ ಪ್ರತಿಷ್ಠಾನ ಟ್ರಸ್ಟ್ (ರಿ)

15, ಮಂತ್ರಾಲಯ, ಪ್ರಶಾಂತಿ ನಗರ, 9ನೇ 'ಬಿ' ಮುಖ್ಯ ರಸ್ತೆ,

ಇಸ್ರೋ ಲೇಔಟ್, ಬೆಂಗಳೂರು–560111

ದೂರವಾಣಿ. 080–26665398